ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ,

ಸಿ.ಸಿ. ನಂ.: 45/2025

..........................................................................

CW 02
PW 02

| | | |
|---|---|---|
| ಹೆಸರು | : | ಸಂತೋಷ ಅಂತೋನ್ ಸಿದ್ದಿ |
| ತಂದೆಯ ಹೆಸರು | : | ಅಂತೋನ್ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಗೌಂಡಿ ಕೆಲಸ |
| ವಾಸಸ್ಥಳ | : | ಸಿದ್ದಾಪುರ, ತಾ: ಹಳಿಯಾಳ. |

ದಿನಾಂಕ 16-09-2025 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನನಗೆ ಚಾಸಾ 3 ರವರ ಪರಿಚಯ ವಿದೆ.

ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿ ತಾವು ಇರುವುದಾಗಿ ಒಪ್ಪಿಕೊಂಡಿದ್ದು, ಆದ್ದರಿಂದ ಅದನ್ನು **ನಿಪಿ 2 ಎಂದು** ಗುರುತಿಸಲಾಯಿತು. ಸದರಿ ಭಾವಚಿತ್ರವನ್ನು ಕೆಸರೋಳ್ಳಿ ಕ್ರಾಸ್ ಹತ್ತಿರ ತೆಗೆಯಲಾಗಿದೆ. ಆ ಜಾಗದಲ್ಲಿ ಮೋಟಾರ ಸೈಕಲ್ ಗೆ ಅಪಘಾತ ಆಗಿದೆ ಎಂದು ಪೊಲೀಸರು ಸಾಕ್ಷಿದಾರರಾಗಿ ಕರೆಯಿಸಿದ್ದರು. ಸದರಿ ಭಾವಚಿತ್ರವನ್ನು 1 ವರ್ಷದ ಹಿಂದೆ ತೆಗೆಯಲಾಗಿದೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ಘಟನಾ ಜಾಗದ ಪಂಚನಾಮೆ ಆಗಿದ್ದು, ಅದರಲ್ಲಿ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುವುದರಿಂದ ಘಟನಾ ಜಾಗದ ಪಂಚನಾಮೆಯನ್ನು **ನಿಪಿ 3 ಎಂದು,** ಸಾಕ್ಷಿಯ ಎರಡು ಸಹಿಗಳನ್ನು **ನಿಪಿ 3 ಎ ಮತ್ತು ಬಿ ಎಂದು** ಗುರುತಿಸಲಾಯಿತು. ಆ ಸಮಯದಲ್ಲಿ ಪೊಲೀಸರು ಕಚ್ಚಾ ನಕಾಶೆಯನ್ನು ತೆಗೆದಿರುತ್ತಾರೆ. ಸಾಕ್ಷಿಗೆ ಸದರಿ ಕಚ್ಚಾ ನಕಾಶೆಯನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿನ ತಮ್ಮ ಸಹಿಯನ್ನು

ಗುರುತಿಸಿರುತ್ತಾರೆ. ಆದ್ದರಿಂದ ಕಚ್ಚಾ ನಕಾಶೆಯನ್ನು **ನಿಪಿ 4 ಎಂದು,** ಸಾಕ್ಷಿಯ ಸಹಿಯನ್ನು ನಿಪಿ **4 ಎ ಎಂದು** ಗುರುತಿಸಲಾಯಿತು.

ಸಾಕ್ಷಿಗೆ ಇನ್ನೊಂದು ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿ ತಾವು ಇರುವುದಾಗಿ ಒಪ್ಪಿಕೊಂಡಿದ್ದು, ಅದರಲ್ಲಿ ಬಸ್ ಇದೆ ಎಂದು ನುಡಿದಿರುತ್ತಾರೆ ಆದ್ದರಿಂದ ಸದರಿ ಭಾವಚಿತ್ರವನ್ನು **ನಿಪಿ 5 ಎಂದು** ಗುರುತಿಸಲಾಯಿತು. ಸದರಿ ಭಾವಚಿತ್ರವನ್ನು ಪೊಲೀಸರು ಠಾಣೆಯಲ್ಲಿ ತೆಗೆದಿರುತ್ತಾರೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ವಾಹನ ತಡೆ ಪಂಚನಾಮೆ ಆಗಿದ್ದು, ಅದರಲ್ಲಿ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುವುದರಿಂದ ವಾಹನ ತಡೆ ಪಂಚನಾಮೆಯನ್ನು **ನಿಪಿ 6 ಎಂದು,** ಸಾಕ್ಷಿಯ ಎರಡು ಸಹಿಗಳನ್ನು **ನಿಪಿ 6 ಎ ಮತ್ತು ಬಿ ಎಂದು** ಗುರುತಿಸಲಾಯಿತು.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**ಪಾಟೀ ಸವಾಲು : ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿನಾಂಕ 01-11-2024 ರಂದು ಅಪಘಾತ ಜಾಗವನ್ನು ಚಾಸಾ 4 ರವರು ತೋರಿಸಿದರು ಎಂದರೆ ಸರಿ. ಘಟನಾ ಜಾಗದಲ್ಲಿ ಪೊಲೀಸರು ನಿಮ್ಮ ಸಮಕ್ಷಮ ಬೆಳಗ್ಗೆ 10-15 ರಿಂದ 11-15 ರ ವರೆಗೆ ಜರುಗಿಸಿ ಓದಿ ಹೇಳಿ ನಿಮ್ಮ ಸಹಿ ಪಡೆದರು ಎಂದರೆ ಸರಿ. ಅದೇ ದಿನ ಪೊಲೀಸರು ಠಾಣೆಯಲ್ಲಿ ಅಪಘಾತ ವಾಹನಗಳ ತಡೆ ಪಂಚನಾಮೆಯನ್ನು ನಿಮ್ಮ ಸಮಕ್ಷಮ ಮಾಡಿ, ಓದಿ ಹೇಳಿ ನಿಮ್ಮ ಸಹಿ ಪಡೆದರು ಎಂದರೆ ಸರಿ. ಆಗ ಸಮಯ 11-25 ರಿಂದ 12-30 ಆಗಿತ್ತು ಎಂದರೆ ಸರಿ.

**ಪಾಟೀ ಸವಾಲುಃ** ಆರೋಪಿತರ ಪರ ಶ್ರೀ ಎಸ್ ಎಲ್ ಎಸ್ ವಕೀಲರಿಂದ.

ಘಟನಾ ಜಾಗದ ಚಕ್ಕು ಬಂದಿಯನ್ನು ಹೇಳಲು ಆಗುವುದಿಲ್ಲ. ಬೈಕ ಮತ್ತು ಬಸ್ಸ ನಂಬರನ್ನು ಹೇಳಲು ಆಗುವುದಿಲ್ಲ. ಪಂಚನಾಮೆಗೆ ಮಾಹಿತಿಯನ್ನು ನೀವು ನೀಡಿಲ್ಲ ಎಂದರೆ ಸರಿ. ಪಂಚನಾಮೆಯಲ್ಲಿ ಬರೆದ ವಿಷಯ ಗೊತ್ತಿಲ್ಲ ಎಂದರೆ ಸರಿ, ಸಾಕ್ಷಿ ನನ್ನಿಂದ ಸಹಿ ಪಡೆದಿರುತ್ತಾರೆ ಎನ್ನುತ್ತಾರೆ. ವಾಹನ ತಡೆ ಪಂಚನಾಮೆ ಜರುಗಿಸಿದ ಜಾಗದ ಚಕ್ಕು ಬಂದಿ ಹೇಳಲು ಆಗುವುದಿಲ್ಲ.

ವಾಹನ ತಡೆ ಪಂಚನಾಮೆ ಜರುಗಿಸುವಾಗ ಬಸ್ ಮತ್ತು ಬೈಕ ನ ಸಂಖ್ಯೆ ಹೇಳಿ ಬರೆಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪೊಲೀಸರು ಬರೆದ ಪಂಚನಾಮೆಗೆ ಸಹಿ ಮಾಡಲು ಹೇಳಿದ್ದರಿಂದ ಮಾಡಿರುತ್ತೀರಿ ಎಂದರೆ ಸರಿ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.